ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರ ಪ್ರಶ್ನೆಗೆ ಎಲ್ಲಾ ವಿವರಗಳನ್ನು ಒದಗಿಸಿದ್ದೇನೆ. ಅಂಕಿ ಅಂಶಗಳನ್ನು ಒದಗಿಸಿ ಕೊಟ್ಟಿದ್ದೇನೆ. ಇದರ ಬಗ್ಗೆ ಅರ್ಧಗಂಟೆ ಚರ್ಚೆಗೆ ಅವಕಾಶ ಕೋರಿದರೆ ಅಷ್ಟರಲ್ಲಿ ಸಂಬಂಧಪಟ್ಟ ವಿಂತ್ರಿಗಳು ಬರುತ್ತಾರೆ. ಈಗ ಅವರು ಕಾಯಿಲೆಯಲ್ಲಿದ್ದಾರೆ. ಅರ್ಧಗಂಟೆ ಚರ್ಚೆಗೆ ಅವಕಾಶ ಕೋರಬಹುದು.

ಅಧ್ಯಕ್ಷರು.—ಅದು ಆಗಬಹುದು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನೀವು ಅವಕಾಶ ಕೊಡುವುದು ಕಷ್ಟವಿದೆ. Please withhold this question.

SRI A. LAKSHMISAGAR.—These answers may be taken on record and on the basis of these answers, half-an-hour discussion may be raised.

ಅಧ್ಯಕ್ಷರು.—ಅರ್ಧಗಂಟೆ ಚರ್ಚೆ ಮಾಡಲಿಕ್ಕೆ ತಾವು ನೋಟೀಸ್ ಕೊಡಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅದು ಆಗಲಿಲ್ಲವಲ್ಲ. ನೀವು ಅವಕಾಶ ಕೊಡಬಹುದು ಕಷ್ಟ ಇದನ್ನು ಹೆಲ್ಪ್ ಓವರ್ ಮಾಡಿ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಕರ್ನಾಟಕದಲ್ಲಿನ ಕೂಡ್ಲಿಗಿಯಂ ಪ್ರವಾಸಿ ಯಾತ್ರಾ ಕೇಂದ್ರದ ಬಗ್ಗೆ

೧೩೫೨. ಶ್ರೀ ಎನ್. ಟಿ. ಬೊಮ್ಮಣ್ಣ (ಕೂಡ್ಲಿಗಿ).—ಮಾನ್ಯ ಮುಜರಾಯಿ ವಿಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಲ್ಲಿ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕದಲ್ಲಿ ಕೂಡ್ಲಿಗಿ ಒಂದು ಪ್ರಮುಖ ಯಾತ್ರಾ ಕೇಂದ್ರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಕೂಡ್ಲಿಗಿಯನ್ನು ಯಾತ್ರಾ ಕೇಂದ್ರವನ್ನಾಗಿ ಅಭಿವೃದ್ಧಿ ಪಡಿಸಲು ಸರ್ಕಾರ ಕೈ ಗೊಂಡಿರುವ ಕ್ರಮಗಳೇನು ?

ಶ್ರೀ ಕೆ. ಅವಂರನಾಥ ಶೆಟ್ಟಿ (ಮುಜರಾಯಿ ಮಂತ್ರಿಗಳು).—

ಅ) ಇಲ್ಲ.

ಆ) ಮೇಲಿನ ಉತ್ತರದ ಮೇರೆಗೆ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಪ್ರವಾಸೋದ್ಯಮದ ಅಭಿವೃದ್ಧಿ

೨೦೬೫. ಶ್ರೀ ಆರ್. ಎನ್. ನಾಯ್ಕ (ಬಟ್ಕಳ).—ಮಾನ್ಯ ವಾರ್ತಾ, ಪ್ರವಾಸೋದ್ಯಮ ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ವಿಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಕೇಂದ್ರ ಸರ್ಕಾರದ ಸಹಾಯದಿಂದ ಪ್ರವಾಸಿ ಕೇಂದ್ರಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರವು ಪ್ರಯತ್ನಿಸುವುದೇ ?

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರವಾಸಿ ಕೇಂದ್ರವನ್ನಾಗಿ ಮಾರ್ಪಡಿಸಲು ಆಯ್ದು ಕೊಳ್ಳಲಾಗಿರುವ ಸ್ಥಳಗಳಾವುವು ? ಉದ್ದೇಶಿಸಿರುವ ಅಂದಾಜು ವೆಚ್ಚವೆಷ್ಟು ?

ಇ) ವಂಠರುಡೇಶ್ವರ ಬನವಾಸಿಗಳನ್ನು ಪ್ರವಾಸಿ ಕೇಂದ್ರಗಳೆಂದು ಪರಿಗಣಿಸಲಾಗಿದೆಯೇ ?

ಶ್ರೀ ಎ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಹಾಗೂ ಬಿ.ಡಿ.ಎ. ಸಚಿವರು).—

ಅ) ಹೌದು.

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ಕೆಳಕಂಡ ಪ್ರವಾಸಿ ಕೇಂದ್ರಗಳನ್ನು ಗುರುತಿಸಿ ಅಭಿವೃದ್ಧಿ ಪಡಿಸಲು ಆಯ್ದು ಕೊಳ್ಳಲಾಗಿದೆ.

ಕ್ರ.ಸಂ.	ಸ್ಥಳಗಳು	ಅಂದಾಜು ಮೆಚ್ಚ ಲಕ್ಷಗಳಲ್ಲಿ
೧	೨	೩
೧	ಕಾರವಾರ	೪೪.೨೨
	ಎ ಜಲಕ್ರೀಡಾ ಸಮುಚ್ಚಯ ಕಟ್ಟುವ ಬಗ್ಗೆ	೩೯.೨೪
೨	ಮುರುಡೇಶ್ವರ	೪೪.೨೨
೩	ಬೆಳಕೆರೆ	೧೪೫.೮೦
೪	ಯಾಣ	೦೦.೯೯
೫	ಬನವಾಸಿ	೧.೦೩
೬	ರಾಮನಗರ	೨.೧೦
೭	ಅನಮೋಡ	೧.೭೩
೮	ಮಾಗೋಡು ಜಲಪಾತ	೧.೧೯
	ಒಟ್ಟು	೨೭೯.೭೨

೪) ಹೌದು.

ಬಿಜಾಪುರ ಜಿಲ್ಲೆಯಲ್ಲಿ ಪಂಪ್‌ಸೆಟ್‌ಗಳ ನಾದುರಸ್ತಿ

೨೦೬೧. ಶ್ರೀ ಎಂ.ಎಲ್. ಮಂತ್ರಿಣ್ಣನವರ್ (ಗೋಕಾಕ್) —ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ವಕ್ಫ್ ಮತ್ತು ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಿಜಾಪುರ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಲಖಮಾಪುರ ಗ್ರಾಮದಲ್ಲಿ ಕೊಳವೆ ಬಾವಿಯಿಂದ ಗ್ರಾಮದ ಜನತೆಗೆ ಕುಡಿಯುವ ನೀರನ್ನು ಪೂರೈಸುತ್ತಿದ್ದುದು ನಿಜವಲ್ಲವೇ ?

ಆ) ಹಾಗಿದ್ದಲ್ಲಿ ಕಳೆದ ಎರಡು ವರ್ಷಗಳಿಂದ ಸದರಿ ಕೊಳವೆ ಬಾವಿಯ ಪಂಪ್‌ಸೆಟ್ ನಾದುರಸ್ತಿಯಿಂದಾಗಿ ಕುಡಿಯುವ ನೀರಿನ ತೊಂದರೆ ಅನುಭವಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಸದರೀ ಗ್ರಾಮದ ಜನತೆಯು ಪಿಹೆಚ್‌ಇ ರವರಿಗೆ ಮನವಿ ಸಲ್ಲಿಸಿದ್ದರೂ ದುರಸ್ತಿ ಮಾಡಿ ನೀರನ್ನು ಒದಗಿಸದೇ ಇರಲು ಕಾರಣವೇನು ?

ಈ) ಹಾಗಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಂಡು ನೀರನ್ನು ಒದಗಿಸಲು ಕ್ರಮ ಕೈ ಕೊಳ್ಳಲಾಗುವುದೇ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ವಕ್ಫ್ ಮತ್ತು ಪಶುಸಂಗೋಪನಾ ಮಂತ್ರಿಗಳು).—

ಅ) ನಿಜ.

ಆ) ಬಂದಿದೆ.